**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಕೆ.ಆರ್.ನಗರ**

**ಸಿ.ಸಿ.1229/2017**

**ಪಿಡಬ್ಲ್ಯೂ-3**

**ಸಿಡಬ್ಲ್ಯೂ-2**

| | | |
|---|---|---|
| ಸಾಕ್ಷಿದಾರರ ಹೆಸರು | - | ಸಂತೋಷ್ ಕೆ ಎಸ್ |
| ತಂದೆಯ ಹೆಸರು | - | ಸದಾಶಿವ |
| ವಯಸ್ಸು | - | 37 |
| ಕೆಲಸ | - | ಸಿ ಪಿ ಸಿ 489, ಇಲವಾಲ ಪೋಲೀಸ್ ಠಾಣೆ |
| ವಾಸ | - | ಕೆ ಆರ್ ನಗರ |

**ದಿನಾಂಕ 24-02-2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

ದಿ:15.03.2015 ರಿಂದ ದಿ:27.07.2017 ವರೆಗೆ ಕೆ ಆರ್ ನಗರ ಪೋಲೀಸ್ ಠಾಣೆಯಲ್ಲಿ ಪೋಲೀಸ್ ಕಾನ್ಸಟೇಬಲ್ ಆಗಿ ಕಾರ್ಯನಿರ್ವಹಿಸಿರುತ್ತೇನೆ.

ದಿ:25.12.2016 ರಂದು ಮದ್ಯಾಹ್ನ 02.30 ಗಂಟೆ ಸಮಯದಲ್ಲಿ ನಾನು ಮತ್ತು ಸಿಬ್ಬಂದಿಯವರಾದ ಚಾಸಾ 1 ಮತ್ತು 3 ರವರನ್ನು ಚಾಸಾ 13 ರವರು ಡೋರನಹಳ್ಳಿ ಗ್ರಾಮದಲ್ಲಿ ಇರುವ ಚರ್ಚ್‌ನಲ್ಲಿ ನಡೆಯುತ್ತಿರುವ ಸಾಂಸ್ಕೃತಿಕ ಕಾರ್ಯಕ್ರಮದ ಕರ್ತವ್ಯಕ್ಕೆ ನಮ್ಮನ್ನು ನೇಮಕ ಮಾಡಿದ್ದರು. ಅದರಂತೆ ನಾವು ಕರ್ತವ್ಯದಲ್ಲಿ ಇದ್ದಾಗ ಸಂಜೆ 06.00 ಗಂಟೆ ಸಮಯದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಯುತ್ತಿದ್ದ ಸಮಯದಲ್ಲಿ 1 ಮತ್ತು 2ನೇ ಆರೋಪಿ ಇವರು ಚರ್ಚ ಮುಂಭಾಗದ ಆವರಣದಲ್ಲಿ ವಿನಾಕಾರಣ ಕೂಗಾಟ ಮಾಡಿ ಅಸಭ್ಯವಾಗಿ ವರ್ತಿಸುತ್ತಾ ಸಾರ್ವಜನಿಕರಿಗೆ ಭಯ ಉಂಟು ಮಾಡುವ ರೀತಿ ಕೂಗಾಡಿ ಅದೇ ಸಮಯದಲ್ಲಿ ನಾವು ಹಾಗೂ ಸಿಬ್ಬಂದಿಯವರು ಸಮವಸ್ತ್ರದಲ್ಲಿ ಇದ್ದಾಗ ಆರೋಪಿಗಳನ್ನು ಸಮಾದಾನ ಪಡಿಸಲು ಪ್ರಯತ್ನಿಸಿದಾಗ ನಮ್ಮ ಮಾತನ್ನು ಕೇಳದೇ ನಮ್ಮ ಕರ್ತವ್ಯಕ್ಕೆ ಅಡ್ಡಿ ಪಡಿಸಿ ನಮ್ಮನ್ನು ತಳ್ಳಾಡಿ ನೂಕಾಡಿರುತ್ತಾರೆ.

ನಂತರ ನಮಗೆ ಅಸಭ್ಯ ಶಬ್ದಗಳಾದ ಬೊಳಿಮಕ್ಕಳಾ ಇಲ್ಲಿಂದ ಆಚೇ ಹೋಗಿ ಎಂದು ಹೇಳಿ ಬೈದಾಡಿದರು. ನಂತರ ಸಾರ್ವಜನಿಕರಾದ ಚಾಸಾ 4 ಮತ್ತು 5 ಇವರು ಸಮಾದಾನ ಪಡಿಸಿದರು ಕೇಳಲಿಲ್ಲ. ನಂತರ ಆರೋಪಿಗಳನ್ನು ನಮ್ಮ ವಶಕ್ಕೆ ಪಡೆದು ಅವರ ಹೆಸರು ವಿಳಾಳ ವಿಚಾರಿಸಿದಾಗ ಅವರ ಹೆಸರು ಷರತ್ ಮತ್ತು ಆ್ಯಂಥೋನಿ ಎಂದು ತಿಳಿದು ಬಂತು. ನಂತರ ಅವರನ್ನು ವಶಕ್ಕೆ ಪಡೆದು ಠಾಣೆಗೆ ಕರೆತಂದು ಪಿ ಎಸ್ ಐ ರವರ ಮುಂದೆ ಹಾಜರುಪಡಿಸಿದೆವು. ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಶ್ರೀ ಹಚ್ ಎಸ್ ಸಿ ವಕೀಲರಿಂದಃ 1 ಮತ್ತು 2 ನೇ ಆರೋಪಿ ಪರ ವಕೀಲರುಃ**

ಘಟನಾ ಸಮಯ ಮದ್ಯಾಹ್ನ 02.30 ಗಂಟೆಯಾಗಿತ್ತು. ಸಾಮಾನ್ಯವಾಗಿ ನಮಗೆ ಗಸ್ತು ಕಾರ್ಯಕ್ಕ ನಿಯೋಜಿಸಿದಾಗ ಠಾಣಾ ದಿನಚರಿಯಲ್ಲಿ ನಮೂದು ಮಾಡಲಾಗುತ್ತದೆ ಎಂದರೆ ಸರಿ. ನಾನು ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸುಮಾರು 500 ಜನ ಸೇರಿದ್ದರು.

ಸದರಿ ಕಾರ್ಯಕ್ರಮ ಅಷ್ಟು ಜೋರಾಗಿ ನಡೆಯಬೇಕಾದರೆ ಸ್ಥಳದಲ್ಲಿ ಸಿಸಿ ಕ್ಯಾಮರಾ ಅಳವಡಿಸಲಾಗಿರುತ್ತದೆ ಎಂದರೆ ಸಾಕ್ಷಿ ನನಗೆ ಆ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಗಲಾಟೆ ಸಮಯದಲ್ಲಿ ನಾನು ಸ್ದಳದಲ್ಲಿ ಇದ್ದೆ. ಸಾಂಸ್ಕೃತಿಕ ಕಾರ್ಯಕ್ರಮ ನಡೆಯುತ್ತಿದ್ದ ಸ್ದಳ ಹಾಗೂ ಗಲಾಟೆ ನಡೆದ ಸ್ದಳಕ್ಕೂ ಸುಮಾರು 500 ಮೀಟರ್ ಅಂತರ ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 500 ಮೀಟರ್ಕಿಂತ ಕಡಿಮೆ ಇತ್ತು ಎಂದು ನುಡಿಯುತ್ತಾರೆ.

ಗಲಾಟೆ ಮಾಡಿದ ವ್ಯಕ್ತಿಗಳು ಗ್ರಾಮಸ್ಥರು ಅಲ್ಲ ಎಂದರೆ ಸರಿಯಲ್ಲ. ಗಲಾಟೆ ಸಮಯದಲ್ಲಿ ನಾನು ಸಮವಸ್ತ್ರದಲ್ಲಿ ಇದ್ದೆ ಎಂದರೆ ಸರಿ. ಆರೋಪಿಗಳು ಯಾವ ರೀತಿ ಕೆಟ್ಟ ವರ್ತನೆ ಮಾಡಿದರು ಎನ್ನುವ ಪ್ರಶ್ನೆಗೆ ಸಾಕ್ಷಿ ಮೊದಲನೆಯದಾಗಿ ನಮ್ಮನ್ನು ತಳ್ಳಾಡಿದರು ನಂತರ ಅವಾಚ್ಯ ಶಬ್ದವಾದ ಬೋಳಿ ಮಕ್ಕಳ ಎಂದು ಹೇಳಿ ಬೈದಾಡಿದರು.

ಗಲಾಟೆ ಸಮಯದಲ್ಲಿ ಸಾರ್ವಜನಿಕರು ಇದ್ದರು. ಆರೋಪಿಗಳು ಎಳೆದಾಡಿದ ಪರಿಣಾಮವಾಗಿ ನಿಮ್ಮ ಸಮವಸ್ತ್ರ ಹರಿದು ಹೋಗಿತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಘಟನೆಯ ಬಗ್ಗೆ ಸಾರ್ವಜನಿಕರು ದೂರನ್ನು ನೀಡಿದರಾ ಎಂದರೆ ಸಾಕ್ಷಿ ನಾವೇ ಪ್ರತ್ಯಕ್ಷ ಅಲ್ಲಿ ಇದ್ದೆವು ಎಂದು ನುಡಿಯುತ್ತಾರೆ.

ಘಟನೆಗೆ ಸಂಬಂದಪಟ್ಟ ಹಾಗೇ ಕಾರ್ಯಕ್ರಮ ಆಯೋಜಕರು ಠಾಣೆಗೆ ಆ ಬಗ್ಗೆ ದೂರು ನೀಡಿದ್ದರಾ ಎನ್ನುವ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಗಲಾಟೆ ನಂತರ ಕಾರ್ಯಕ್ರಮ ಮುಂದುವರೆಯಿತು ಎಂದರೆ ಸರಿ. ಗಲಾಟೆ ನಂತರ ನೀವು ಕರ್ತವ್ಯ ಮುಂದುವರೆಸಿದಿರಾ ಎನ್ನುವ ಪ್ರಶ್ನೆಗೆ ಸಾಕ್ಷಿ ನಾನು ಆರೋಪಿಗಳನ್ನು ಕರೆದುಕೊಂಡು ಠಾಣೆಗೆ ಬಂದಿರುತ್ತೇನೆ ಎಂದು ನುಡಿಯುತ್ತಾರೆ.

<u>ಮರು ವಿಚಾರಣೆ</u> - ಇರುವುದಿಲ್ಲ

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಗಾಯತ್ರಿ)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ